ಪ್ರಕಟಣೆಯ ಕೃಪೆಗಾಗಿ

## ಅಂತರಾಷ್ಟ್ರೀಯ ರಂಗಭೂಮಿ ಸಂಸ್ಥೆ

# ವಿಶ್ವರಂಗಭೂಮಿ ದಿನ 27.03.2007

## ಅಂತರಾಷ್ಟ್ರೀಯ ರಂಗಭೂಮಿ ಸಂದೇಶ



**ಡಾ॥ ಸುಲ್ತಾನ್ ಬಿನ್ ಮೊಹಮದ್ ಅಲ್ ಖಾಸೀಮಿ**

**(ಮೆಂಬರ್ ಆಫ್ ದಿ ಸುಪ್ರೀಮ್ ಕೌನ್ಸಿಲ್ ಆಫ್ ದಿ ಯುನೈಟೆಡ್ ಅರಬ್ ಎಮಿರೇಟ್ಸ್, ರೂಲರ್ ಆಫ್ ಷಾರ್ಜಾ)**

ರಂಗಭೂಮಿಯ ಬಗ್ಗೆ ನನಗೆ ಒಲವು ಮೂಡಿದ್ದು ನನ್ನ ಶಾಲಾ ಆರಂಭದಿನಗಳಲ್ಲಿ, ಅಂದಿನಿಂದ ನಾನು ಆ ಮಾಯಾಲೋಕದ ಬಂಧಿಯಾದೆ.

ನಟ, ನಾಟಕಕಾರ ಮತ್ತು ನಿರ್ದೇಶಕನಾಗಿ ರಂಗಪ್ರಯೋಗದಲ್ಲಿ ತೊಡಗಿಸಿಕೊಂಡಾಗ ಬುದ್ಧಿ ಮತ್ತು ಚೈತನ್ಯಗಳ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆಯಂತೆ ಆರಂಭವಾದ ರಂಗಭೂಮಿಯೊಂದಗಿನ ಸಾಮಾನ್ಯ ಒಡನಾಟ, ಅದನ್ನೂ ಮೀರಿದಂತೆ ಕಂಡಿತು.

ನನಗೆ ನೆನಪಿರುವಂತೆ ಅಧಿಕಾರಿಗಳ ಕೋಪಕ್ಕೆ ಒಂದು ರಾಜಕೀಯ ಪ್ರಹಸನ ಕಾರಣವಾಗಿತ್ತು. ಎಲ್ಲವನ್ನು ಕಿತ್ತುಕೊಂಡು ನನ್ನ ಕಣ್ಣ ಮುಂದೆಯೇ ರಂಗಮಂದಿರ ಮುಚ್ಚಲಾಯಿತು. ಆದರೆ ಸಶಸ್ತ್ರ ಸೈನಾಧಿಕಾರಿಗಳ ಕಾಲ್ತುಳಿತದಿಂದ ರಂಗಚೇತನವನ್ನು ದಮನ ಮಾಡಲು ಸಾಧ್ಯವಾಗಲಿಲ್ಲ. ಆ ಚೇತನ ಆಶ್ರಯ ಹುಡುಕುತ್ತಾ ನನ್ನ ಅಂತರಂಗದಲ್ಲಿ ನೆಲೆಮಾಡಿದಾಗ ರಂಗಭೂಮಿಯ ಅಗಾಧ ಶಕ್ತಿಯ ಅರಿವು ನನಗಾಯಿತು. ಆಗ ರಂಗಶಕ್ತಿಯ ನಿಜಸಾರ ನನ್ನನ್ನು ಗಾಢವಾಗಿ ತಾಕಿ ರಾಷ್ಟ್ರೀಯ ಜನಜೀವನದಲ್ಲಿ ವಿಶೇಷವಾಗಿ ಭಿನ್ನಮತ ಹಾಗೂ ವಿರೋಧವನ್ನು ಸಹಿಸಲಾರದವರ ನಿಟ್ಟಿನಲ್ಲಿ ರಂಗಭೂಮಿ ಏನು ಮಾಡಬಹುದೆಂಬುದನ್ನು ಮನಗಂಡೆ.

ಕೈರೋ ವಿಶ್ವವಿದ್ಯಾಲಯದ ದಿನಗಳಲ್ಲಿ ರಂಗಭೂಮಿಯ ಶಕ್ತಿ ಮತ್ತು ಚೈತನ್ಯ ನನ್ನ ಪ್ರಜ್ಞೆಯಲ್ಲಿ ಬಲವಾಗಿ ಬೇರೂರಿತು. ರಂಗಭೂಮಿಯ ಬಗ್ಗೆ ಬರೆಯಲಾದ ಎಲ್ಲವನ್ನೂ ಅಧ್ಯಯನ ಮಾಡಿ ರಂಗಪ್ರದರ್ಶನಗಳಲ್ಲಿನ ವಿವಿಧ ಆಯಾಮಗಳನ್ನು ಕಂಡೆ. ರಂಗಭೂಮಿಯ ಇತ್ತೀಚಿನ ಬೆಳವಣಿಗೆಗಳನ್ನು ಅನುಸರಿಸಲು ಪ್ರಯತ್ನಿಸಿದಂತೆ ರಂಗಪ್ರಜ್ಞೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಆಳವಾಯಿತು.

ಅಂದಿನ ಗ್ರೀಕ್ ಕಾಲದಿಂದ ಇಂದಿನ ರಂಗಭೂಮಿಯವರೆಗಿನ ಅಧ್ಯಯನದಲ್ಲಿ ರಂಗ ಜಗತ್ತುಗಳು ಪ್ರದರ್ಶಿಸುವ ಆಂತರಿಕ ಚಮತ್ಕಾರದ ತೀವ್ರ ಅರಿವು ನನಗುಂಟಾಗಿದೆ. ಹೀಗೆ ರಂಗಭೂಮಿಯು ಆತ್ಮಾನುಸಂಧಾನಕ್ಕೆಡೆಮಾಡಿ ಮನುಷ್ಯನ ಚೈತನ್ಯದಲ್ಲಿ ಆಳವಾಗಿ ಅಡಗಿರುವ ನಿಧಿ ತೆರೆದಿಡುತ್ತೆ.

ಶಾಂತಿ ಮತ್ತು ಪ್ರೀತಿಯನ್ನು ಹರಡಲು ಹಾಗೂ ಏಕೀಕರಣದ ಸಾಧನವಾಗಬಲ್ಲ ರಂಗಶಕ್ತಿ ಮೇಲಿನ ನನ್ನ ಅಚಲನಂಬಿಕೆಯನ್ನು ಬಲಪಡಿಸಿದೆ. ಬೇರೇ ಬೇರೇ ವರ್ಗ, ಜಾತಿ, ವರ್ಣ, ಸಂಪ್ರದಾಯಗಳ ಮಧ್ಯೆ ಸಂವಾದದ ಹೊಸ ಮಾರ್ಗವನ್ನು ಈ ರಂಗಶಕ್ತಿ ತೆರೆದಿಡುತ್ತದೆ.

ಮಾನವಕುಲ ಒಳ್ಳೆಯತನದಲ್ಲಿ ಒಗ್ಗಟ್ಟಾಗಿ ನಿಲ್ಲಬಲ್ಲದು. ದುಷ್ಟತನದಲ್ಲಿ ವಿಭಜನೆಗೊಳ್ಳುವುದು ಮಾತ್ರ ಎಂಬ ನಂಬಿಕೆ ಮತ್ತು ಪರರನ್ನು ಅವರಿದ್ದಂತೆ ಸ್ವೀಕರಿಸುವ ಪ್ರವೃತ್ತಿ ವ್ಯಕ್ತಿಗತವಾಗಿ ನನಗೆ ರಂಗಶಕ್ತಿ ಕಲಿಸಿದೆ ನಿಜ. ಒಳ್ಳೆಯ ಮತ್ತು ಕೆಟ್ಟದರ ನಡುವಿನ ಹೋರಾಟ ರಂಗಭೂಮಿಯ ಆಂತರ್ಯದಲ್ಲಿ ಅಡಕವಾಗಿದೆ. ಏನೇ ಆಗಲಿ ಕೊನೆಗೆ ಸಾಮಾನ್ಯ ಜ್ಞಾನ ಉಳಿಯುತ್ತದೆ. ಮತ್ತು ಮಾನವ ಸಹಜ ಸ್ವಭಾವ ಒಳ್ಳೆಯ ಪರಿಶುದ್ಧ ಮೌಲ್ಯಯುತವಾದುದಲ್ಲಿ ಒಂದಾಗುತ್ತದೆ.

ಅನಾದಿ ಕಾಲದಿಂದ ಮನುಕುಲದ ಮೇಲೆರಗಿದ ಯುದ್ಧಗಳು ಕೆಟ್ಟಯೋಚನೆಗಳಿಂದ ಬಾಧಿಸುತ್ತಾ ಜೀವನ ಸೌಂದರ್ಯವನ್ನು ಗುರುತಿಸಿಲ್ಲ. ಬೇರೆ ಯಾವ ಕಲಾ ಪ್ರಕಾರವೂ ರಂಗಭೂಮಿಯಷ್ಟು ನಿಷ್ಠೆಯಿಂದ ಸೌಂದರ್ಯವನ್ನು ಹಿಡಿದಿಡಲು ಸಾಧ್ಯವಿಲ್ಲ ಎಂದು ವಾದಿಸಬಹುದು. ರಂಗಭೂಮಿ ಎಲ್ಲಾ ರೀತಿಯ ಸೌಂದರ್ಯವನ್ನು ಒಳಗೊಂಡಿರುವ ಒಂದು ಸಂಪುಟ. ಸೌಂದರ್ಯಕ್ಕೆ ಬೆಲೆ ನೀಡದವರು ಬದುಕಿಗೆ ಬೆಲೆ ನೀಡಲಾರರು.

ರಂಗಭೂಮಿಯೇ ಬದುಕು. ಜವಾಬ್ದಾರಿಯುತವಾದ ಪ್ರಜ್ಞೆಯಿಂದ ವಿಚಲಿತವಾಗದೆ ಆಗ್ಗಾಗ್ಗೆ ತಲೆ ಎತ್ತುತ್ತಿರುವ ನಿರರ್ಥಕ ಯುದ್ಧ ಮತ್ತು ಸೈದ್ಧಾಂತಿಕ ಭೇದಭಾವನೆಗಳನ್ನು ತ್ಯಜಿಸುವುದು ಹಿಂದೆಂದಿಗಿಂತಲೂ ಪ್ರಸ್ತುತ. ಹಿಂಸೆ ಮತ್ತು ಕೊಲೆಗಳ ದೃಶ್ಯಗಳನ್ನು ನಾವೀಗ ಕೊನೆಗಾಣಿಸಬೇಕಾಗಿದೆ. ಈ ದೃಶ್ಯಗಳು ಇಂದಿನ ಜಗತ್ತಿನಲ್ಲಿ ಸಾಮಾನ್ಯ ಘಟನೆಗಳಾಗಿವೆ. ಈ ದುಷ್ಟ ಸಿರಿವಂತಿಕೆ ಮತ್ತು ಕಡು ಬಡತನಗಳ ನಡುವೆ ಇರುವ ಆಗಾಧ ಅಂತರ ಹಾಗೂ ಜಗತ್ತಿನ ಅನೇಕ ಭಾಗಗಳಲ್ಲಿ ವ್ಯಾಪಿಸಿರುವ ಏಡ್ಸ್ ಅಂತಹ ರೋಗಗಳಿಂದ ಈ

............2

ದೃಶ್ಯಗಳು ಉಲ್ಬಣಗೊಂಡು ನಿರ್ಮೂಲನೆಗೊಳಿಸಿವ ಶ್ರಮವನ್ನು ನಿಷ್ಫಲಗೊಳಿಸಿದೆ. ಈ ಜಗತ್ತನ್ನು ನಿಶ್ಚಯವಾಗಿ ಉತ್ತಮ ಹಾಗು ಸಂತೋಷಗೊಳಿಸಬಲ್ಲ ಪ್ರಾಮಾಣಿಕ ಸಂವಾದದ ಅಭಾವದಿಂದ ದುರ್ಘಟನೆ ಹಾಗೂ ಇನ್ನಿತರ ಕಷ್ಟಗಳು ಈ ಕೆಡಕುಗಳ ಜೊತೆಗಿವೆ.

ಓ ರಂಗಬಾಂಧವರೆ ! ಬಿರುಗಾಳಿಯಲ್ಲಿ ಸಿಲುಕಿದ್ದೇವೆ ಎಂದೆನಿಸುತ್ತದೆ. ಸಮೀಪಸುತ್ತಿರುವ ಸಂಶಯ ಹಾಗೂ ಅನುಮಾನಗಳ ಧೂಳಿನಿಂದ ಆವರಿಸಿಕೊಂಡು ನಮ್ಮ ದೃಷ್ಟಿ ಸಂಪೂರ್ಣವಾಗಿ ಗ್ರಹಣ ಹಿಡಿದಂತಾಗಿದೆ. ನಮ್ಮ ಧ್ವನಿ ಕೀರಲುಗೊಂಡು ಕ್ಷೀಣವಾಗಿದೆ. ರಂಗಭೂಮಿಯಂತಹ ಕಲಾ ಪ್ರಕಾರಗಳಲ್ಲಿ ಅದ್ವಿತೀಯವಾಗಿ ಪ್ರಸ್ತುತಗೊಂಡಿರುವ ಸಂಭಾಷಣೆ ಮೇಲೆ ಆಳವಾದ ನಂಬಿಕೆ ಇಲ್ಲದಿದ್ದರೆ ನಮ್ಮನ್ನು ಬೇರ್ಪಡಿಸುವ ಪಣ ತೊಟ್ಟ ಬಿರುಗಾಳಿಯಲ್ಲಿ ತೂರಿ ಹೋಗುತ್ತಿದ್ದೆವು. ಆದ್ದರಿಂದ ಈ ಬಿರುಗಾಳಿಗೆ ಕುಮ್ಮಕ್ಕು ಕೊಡುವವರನ್ನು ಎದುರಿಸಿ ಅವರೊಂದಿಗೆ ಸೆಣಸಬೇಕು. ಅವರನ್ನು ವಿನಾಶಗೊಳಿಸುವುದಕ್ಕಲ್ಲ. ಈ ಬಿರುಗಾಳಿಯಿಂದ ಕಲುಷಿತಗೊಂಡ ವಾತಾವರಣದಿಂದ ಮೇಲೇರಲು ನಾವು ಅವರನ್ನು ಎದುರಿಸಬೇಕು. ಸ್ನೇಹ ಬಂಧನ ಹಾಗೂ ಭ್ರಾತೃತ್ವದ ಕರೆ ನೀಡುತ್ತಿರುವ ದೇಶ ಹಾಗೂ ಜನತೆಯಲ್ಲಿ ನಮ್ಮ ಸಂದೇಶವನ್ನು ಸಾರಲು ನಮ್ಮ ಶ್ರಮವನ್ನು ಒಗ್ಗೂಡಿಸಬೇಕು. ನಾವು ಕೇವಲ ಮರ್ತ್ಯರು, ಆದರೆ ರಂಗಭೂಮಿ ಬದುಕಿನಷ್ಟೇ ಅಮರ.

*** ಸುಲ್ತಾನ್ ಬಿನ್ ಮೊಹಮದ್ ಅಲ್‌ಖಾಸೀಮಿ**

**ಕನ್ನಡಕ್ಕೆ : ಶ್ರೀಕಂಠ ಗುಂಡಪ್ಪ (ರಂಗಕರ್ಮಿ)**

-------

**ಡಾ॥ ಸುಲ್ತಾನ್ ಬಿನ್ ಮೊಹಮದ್ ಅಲ್ ಖಾಸೀಮಿಯವರ ಕಿರುಪರಿಚಯ**

ಕೃಷಿ ತಂತ್ರಜ್ಞಾನ, ಇತಿಹಾಸ ಮತ್ತು ರಾಜ್ಯ ಶಾಸ್ತ್ರಗಳಲ್ಲಿ ಪರಿಣಿತರಾದ ಹಿಜ್ ಹೈನೆಸ್ ಶೇಖ್ ಡಾ॥ ಸುಲ್ತಾನ್ ಬಿನ್ ಮಹಮೊದ್ ಆಲ್ ಖಾಸೀಮಿ ಅರಬ್ ಒಕ್ಕೂಟದ ಶಿಕ್ಷಣ ಮಂತ್ರಿ. ಉನ್ನತ ಸಮಿತಿಯ ಸದಸ್ಯ, ಮಧ್ಯ ಈಶಾನ್ಯ ಇಸ್ಲಾಮಿಕ್ ಧರ್ಮ ಸಂಸ್ಥೆಯ ಸದಸ್ಯ ಷಾರ್ಜ ವಿಶ್ವವಿದ್ಯಾನಿಲಯದ ಅಧ್ಯಕ್ಷ, ಅಂತರಾಷ್ಟ್ರೀಯ ಮಾನವೀಯ ಸಂಘದ ಗೌರವ ಸದಸ್ಯ, ಎಕ್ಸೆಟರ್ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ, ಜಾಗತಿಕ ವಿಶ್ವವಿದ್ಯಾನಿಲಯ ಸೇವೆಗಳ ಅಧ್ಯಕ್ಷ ಹಾಗೂ ಗೌರವ ಸಲಹೆಗಾರ, ಗಲ್ಫ್ ಆಧುನಿಕ ಚರಿತ್ರೆಯ ಪ್ರಾಧ್ಯಾಪಕ ಈಜಿಪ್ಟಿನ ಇತಿಹಾಸ ಅಧ್ಯಯನ ಸಂಘದ ಗೌರವ ಅಧ್ಯಕ್ಷ– ಹೀಗೆ ಹತ್ತು ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಹಲವಾರು ಡಾಕ್ಟರೇಟ್‌ಗಳಿಗೆ ಭಾಜನರಾಗಿದ್ದಾರೆ. ಅಲ್ಲದೇ ಇಸ್ಲಾಂಧರ್ಮ, ರಾಜಕೀಯ, ಇತಿಹಾಸ ಮತ್ತು ಸಂಸ್ಕೃತಿಗಳ ಮೇಲೆ ಬೆಳಕು ಚೆಲ್ಲುವ ಪುಸ್ತಕಗಳು ಇವರಿಂದ ರಚಿಸಲ್ಪಟ್ಟು ಇಂಗ್ಲೀಷ್, ರಷ್ಯನ್, ಜರ್ಮನ್, ಫ್ರೆಂಚ್, ಸ್ಪಾನೀಷ್, ಡ್ಯಾನಿಷ್, ಇತ್ಯಾದಿ ಭಾಷೆಗಳಿಗೆ ತರ್ಜುಮೆಗೊಂಡಿವೆ.

------

**ಅಂತರಾಷ್ಟ್ರೀಯ ರಂಗಸಂಸ್ಥೆಯ ಕಾರ್ಯಸೂಚಿ;**

ವಿಶ್ವರಂಗಭೂಮಿ ದಿನಾಚರಣೆ (ಮಾರ್ಚ್ 27)

ವಿಶ್ವನೃತ್ಯ ದಿನಾಚರಣೆ (ಮಾರ್ಚ್29)

ಅಂತರಾಷ್ಟ್ರೀಯ ರಂಗೋತ್ಸವ

ಜಾಗತಿಕ ಕಾಂಗ್ರೆಸ್ ಸಮಾವೇಶ (ಅರೆವಾರ್ಷಿಕ)

ಈ ಪ್ರಮುಖ ಕಾರ್ಯಕ್ರಮಗಳ ಜೊತೆಗೆ ಭಾರತ, ಬಾಂಗ್ಲಾ, ನೇಪಾಳ್, ಪಾಕಿಸ್ಥಾನ, ಗ್ರೀಕ್, ಟೋಕಿಯೋ ಸೆಂಟ್ ಪಿಟ್ಸ್‌ಬರ್ಗ್, ಸೂಡಾನ್, ಬರ್ಲಿನ್, ಫ್ರಾನ್ಸ್, ನ್ಯೂಯಾರ್ಕ್, ಅಮೇರಿಕಾ, ಆಸ್ಟ್ರೇಲಿಯಾ, ಮೆಕ್ಸಿಕೊ, ಕೊಲಂಬಿಯಾ ಇತ್ಯಾದಿ ದೇಶಗಳಲ್ಲಿ ಸಮಾವೇಶಗಳು ರಂಗ ತರಬೇತಿ ಕಾರ್ಯಾಗಾರ, ಅಂತರಾಷ್ಟ್ರೀಯ ನೃತ್ಯ ಸಂಸ್ಥೆಯ ವತಿಯಿಂದ ನೃತ್ಯ ಕಾರ್ಯಕ್ರಮಗಳು ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ ಹೀಗೆ ನಾಟಕ ಮತ್ತು ನೃತ್ಯ ಪ್ರದರ್ಶನದ ಬಗ್ಗೆ ಅಂತರಾಷ್ಟ್ರೀಯ ರಂಗಸಂಸ್ಥೆ ಸ್ಥಳೀಯ ಸಂಪನ್ಮೂಲ ಕೇಂದ್ರ ಶಾಖೆಗಳ ಸಹಯೋಗದಿಂದ ವರ್ಷಪೂರ್ತಿ ಚಟುವಟಿಕೆಗಳನ್ನು ಆಯೋಜಿಸಿದೆ.

ಸಂಗ್ರಾಹಕ ;

**(ಶ್ರೀಕಂಠ ಗುಂಡಪ್ಪ)**

**ನಂ. 57 'ಈಶಾನ್ಯ' 3ನೇ ಮೈನ್, 3ನೇ ಕ್ರಾಸ್, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು–570 026 ದೂರವಾಣಿ: 2598801 ಮೊ: 9986006625**